**ಸಾಕ್ಷಿಯನ್ನು ದಿನಾಂಕಃ 19.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಂ.ಎನ್.ಆರ್. ವಕೀಲರಿಂದಃ**

ನನ್ನ ತಂದೆಯ ಹೆಸರು ಸಣ್ಣಕೂಸನಾಯಕ ಎಂಬುದಾಗಿರುತ್ತದೆ. ನನ್ನ ಗಂಡನ ಹೆಸರು ಚಿಕ್ಕಚೆನ್ನನಾಯಕ ಎಂಬುದಾಗಿರುತ್ತದೆ. ಚಿಕ್ಕಬಸವನಾಯಕ ಎನ್ನುವವರು ಯಾರು ಇರುವುದಿಲ್ಲ. ಸಾಕ್ಷಿ ಮುಂದುವರೆದು ಬಸವನಾಯಕ ಅಂದರೆ ನನ್ನ ತಾಯಿಯ ತಂದೆ ಎನ್ನುವವರು ಮಾತ್ರ ಇರುತ್ತಾರೆಂದು ನುಡಿಯುತ್ತಾರೆ. ನಿ.ಪಿ.-1 - ಕ್ರಯ ಪತ್ರವನ್ನು ನಾನೇ ಹಾಜರುಮಾಡಿರುತ್ತೇನೆ. ಸದರಿ ದಾಖಲೆಯ ಮೊದಲನೇ ಪುಟ್ಟದಲ್ಲಿ ಚಿಕ್ಕವಸವನಾಯಕರವರ ಮಗ / ಮಗಳು / ಪತ್ನಿ ಗೋಪಮ್ಮ ಎಂದು ನಮೂದಿರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾತನ ಹೆಸರು ಬಸವನಾಯಕ ಎಂಬುದಾಗಿರುತ್ತದೆಂದು ನುಡಿಯುತ್ತಾರೆ. ನಿ.ಪಿ.-1 ಕ್ರಯ ಪತ್ರದ ಧೃಡೀಕೃತ ನಕಲನ್ನು ದಿನಾಂಕಃ 07.02.2012 ರಂದು ಪಡೆದುಕೊಂಡಿರುತ್ತೇನೆಂದರೆ ಸರಿ. ಸದರಿ ದಾಖಲೆಯನ್ನು ಪಡೆದ 03 ವರ್ಷದ ನಂತರ ಈ ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ನಿ.ಪಿ.-8 ಕ್ರಯ ಪತ್ರವನ್ನು ನನ್ನ ತಾತನಾದ ಬಸವನಾಯಕ ತೆಗೆದಿಟ್ಟಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ಮೊದಲೇ ಹಾಜರುಪಡಿಸಲು ತೊಂದರೆ ಇದ್ದಿರಲಿಲ್ಲವೆಂದರೆ ಸರಿ. ಸದರಿ ದಾಖಲೆ ನಮ್ಮ ಮನೆಯಲ್ಲಿಯೇ ಇದ್ದಿರುತ್ತದೆ. ನನ್ನ ತಾತ ತೀರಿಕೊಂಡಾಗಿನಿಂದ ಸದರಿ ದಾಖಲೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ತಾತನಾದ ಬಸವನಾಯಕರವರ ಕುಟುಂಬದ ವಂಶವೃಕ್ಷ ಹಾಜರುಪಡಿಸಿರುತ್ತೇನೆ. ನಿ.ಪಿ.-9 ರಿಂದ ನಿ.ಪಿ.-11 ದಾಖಲೆಗಳನ್ನು ನಾನೇ

ಹಾಜರುಪಡಿಸಿರುತ್ತೇನೆ. ನಿ.ಪಿ.-12 ದಾಖಲೆಯಲ್ಲಿ ತಿಳಿಸಿರುವ ಆಸ್ತಿಯು ಮತ್ತು ನಮ್ಮ ಆಸ್ತಿಯು ಆಜು-ಬಾಜು ಇರುವ ಬಗ್ಗೆ ಸದರಿ ನಿ.ಪಿ.-12ರ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಅಳತೆ ಸಂಬಂಧ ನನಗೆ ನೋಟೀಸ್ ನೀಡಿರುತ್ತಾರೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ವಾದ ಪತ್ರದಲ್ಲಿ ನಮ್ಮ ಆಸ್ತಿಯ ಪಕ್ಕಕ್ಕೆ ಕುಮುದಾ ಅಥವಾ ಈಶ್ವರ್ ರವರ ಆಸ್ತಿ ಇರುವ ಬಗ್ಗೆ ತಿಳಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಗೋವಿಂದರಾಜುಗೆ ಶಿವನಯ್ಯ ಮಾದನಾಯಕ ಮಾರಾಟ ಮಾಡಿದ್ದು, ಸದರಿ ಗೋವಿಂದರಾಜುರವರ ಮಗಳ ಹೆಸರು ಕುಮುದಾ ಎಂಬುದಾಗಿದ್ದು ಅವರು ಈಶ್ವರ ಎನ್ನುವವರಿಗೆ ನಿ.ಪಿ.-12ರ ಮೂಲಕ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. ಶಿವನಯ್ಯ ಮಾದನಾಯಕ ಗೋವಿಂದರಾಜುಗೆ ಮಾರಾಟ ಮಾಡಿದ ಬಗ್ಗೆ ಕ್ರಯ ಪತ್ರ ಹಾಜರುಪಡಿಸಿರುವುದಿಲ್ಲ. ನಾನು ಯಾವ ಸಮಯದಲ್ಲಿಯೂ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಬದಲಾಗಿ ಪ್ರತಿವಾದಿಯ ಸ್ವಾದೀನಾನುಭವದಲ್ಲಿರುವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ನಿ.ಪಿ.-15 ರಿಂದ ನಿ.ಪಿ.-23ರ ದಾಖಲೆಗಳನ್ನು ಈ ದಾವೆಗೋಸ್ಕರ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**